ಬಂದ ಶ್ರೀಸಾಮಾನ್ಯ ಪ್ರಜಾಸಮೂಹವನ್ನೂ ತಡೆಯಲಾಗುತ್ತಿಲ್ಲ!

ದೇವಾಲಯದ ಒಳಗೂ, ಹೊರಗೂ ಅಂಕೆಸಂಖ್ಯೆಯಿಲ್ಲದ ಜನಸಂದೋಹವಿರಲು ಇದ್ದಕ್ಕಿದ್ದಂತೆಯೇ ಗುಡಿಯ ಹೊರ ಆವರಣದಲ್ಲಿ ನಿಂತವನೊಬ್ಬ, 'ಗುಡಿಯ ಒಳ ಪ್ರಾಂಗಣವೇ ಅಲ್ಲದೆ ಗರ್ಭಗುಡಿಯ ಸುಂದರಮೂರ್ತಿಗಳನ್ನು ಕೆತ್ತಿರುವವರು ನಾವೇ. ವಿದರ್ಭ ನಗರದಲ್ಲಿ ಕಟ್ಟಿದ ದೇವಾಲಯದಲ್ಲೂ ಹೀಗೆ ನಮ್ಮ ಕಾಯಕಕ್ಕೆ ತಕ್ಕ ಬೆಲೆಯನ್ನು ನೀಡಿ ಅಂದರೆ ನಮ್ಮನ್ನು ಗಡಿಪಾರು ಮಾಡಿದರಲ್ಲ. ಇಲ್ಲಾದರೋ ನಾವೇ ಕಟ್ಟಿದ ಗುಡಿಯಿಂದ ನಮ್ಮನ್ನೇ ಹೊರ ಹೋಗಲು ಡಂಗುರ ಹೊಡೆಸುತ್ತಿರುವರು. ಇದು ಅನ್ಯಾಯ, ಅನ್ಯಾಯ' ಎಂದು ಗದ್ದಲವೆಬ್ಬಿಸಿಬಿಟ್ಟನು.

ಇತ್ತ ಜಿತಸೇನರು ಮಂತ್ರಿಗಳಿಗೆ, 'ಈ ದೇವಮಂದಿರದಲ್ಲಿ ಮುಂದೆಯೂ ಆಚಂದ್ರಾರ್ಕತಾರಾಂಬರಪರ್ಯಂತರವಾಗಿ ಇದೇ ವಿಜೃಂಭಣೆಯಲ್ಲಿ ನಿತ್ಯ ಪೂಜಾದಿ ಕೈಂಕರ್ಯಗಳು ನಡೆಯುವಂತಾಗಬೇಕು. ರಾಜ್ಯದ ಯಾವ ಎಡೆಯಲ್ಲಿ ಫಲವತ್ತಾದ ಭೂಮಿ ಇದೆ, ಅಲ್ಲಿ ಇದೀಗ ದುಡಿದ ಸೆರೆಮನೆವಾಸಿಗಳಲ್ಲದೇ ಗಾಂವಟಿ ಲೋಗರು ತಮ್ಮ ಕಾಯಕವನ್ನು ಮುಂದುವರಿಸಿ ಮಂದಿರಕ್ಕೆ ಹೇರಳ ಧನಕನಕ, ದವಸಧಾನ್ಯಗಳು ಬರುವಂತೆ ನೋಡಿಕೊಳ್ಳಬೇಕು' ಎಂಬ ಆಜ್ಞೆಯನ್ನು ನೀಡುವಲ್ಲಿ ಅಲ್ಲೇ ನೆರೆದ ಪಂಡಿತರು ಅದನ್ನು ಕೇಳಿ ಹರ್ಷಚಿತ್ತರಾಗಿ, 'ಸಾಧು, ಸಾಧು ಜಿತಸೇನ ಮಹಾರಾಜರು ನಮ್ಮೊಂದಿಗೆ ನೂರ್ಕಾಲ ಬಾಳುವಂತಾಗಲಿ' ಎಂದು ಎರಡು ಹಸ್ತಗಳನ್ನೆತ್ತಿ ಆಶೀರ್ವದಿಸಿದರು. ಜಿತಸೇನರು ವಿನೀತ ಭಾವದಲ್ಲಿ ಶಿರಬಾಗಿ ನಿಂತರು.

ನಗರದಾಚೆಯ ಗಾಂವಟಿಗರ ಘೋಷಣೆಯೇ ಅಲ್ಲದೆ ಇದೀಗ ಗುಡಿಯಾಚೆಯ ಶಿಲ್ಪಿಗಳ, ಕೂಲಿಯಾಳುಗಳ ಗದ್ದಲವು ಹೊರಗಿನ ಕಾವಲುಭಟರಿಂದ ಒಳಗೆ ಅಡ್ಡಾಡುತ್ತಿದ್ದ ಅರ್ಚಕ ಸಹಾಯಕರಿಗೆ, ಅವರಿಂದ ಆಗಮಿಕರಿಗೆ, ಅಲ್ಲಿಂದ ಗರ್ಭಾಂಕಣದ ಮುಂದೆ ಭಕ್ತಿಯ ಭರಪೂರ ಭಾವದಲ್ಲಿ ನಿಂತಿದ್ದ ಜಿತಸೇನ ಮಹಾರಾಜರ ಕರ್ಣಪಟಲಕ್ಕೆ ಪಿಸುದನಿಯಲ್ಲಿ ತಟ್ಟಲು, ಅಲ್ಲೇ ಅವರ ನೇತ್ರಗಳು ಹೋಮಕುಂಡವಾಗಿ, ಹೊಗೆ ಸೂಸುತ್ತ, ಅವರ ಬಾಯಿಂದ 'ಎಲಾ ರಾಜಧರ್ಮ ದ್ರೋಹಿಗಳೇ' ಎಂಬ ಮಾತು ಗಂಟಲನ್ನು ತೀಡಿಕೊಂಡು ಬಂದಿತು.

## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿ (ಚಾಮರಾಜ ನಗರ) ಸಂದರ್ಶಕ ಪ್ರಾಧ್ಯಾಪಕರು. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ', 'ಕಳೆದ ಮಂಗಳವಾರ ಮುಸ್ಸಂಜೆ' ಎಂಬ ಕಥಾಸಂಕಲನಗಳನ್ನು, 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ', 'ಸಿದ್ಧಿಯ ಕೈ ಚಂದ್ರನತ್ತ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರಗೊಂಡಿದೆ. ಜಾನಪದಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಸಂಪಾದಿಸಿದ್ದಾರೆ. 'ಕಾಲುದಾರಿಯ ಕಥನಗಳು' ಅವರ ಜಾನಪದ ಕ್ಷೇತ್ರ ಕಾರ್ಯದ ಅನುಭವ ಕಥನವಾಗಿದೆ. ಅವರ ಕುಮಾರವ್ಯಾಸ ಭಾರತ ಸಂಗ್ರಹ, 'ಸರಸ ಸೌಗಂಧಿಕದ ಪರಿಮಳ' ಪುಸ್ತಕ ಅಹರ್ನಿಶಿ ಪ್ರಕಾಶನದಿಂದ, ಕಾದಂಬರಿ 'ಕಾಲಯಾತ್ರೆ' ಅಂಕಿತ ಪುಸ್ತಕದಿಂದ ಇತ್ತೀಚೆಗೆ ಪ್ರಕಟವಾಗಿವೆ.